# ಕೆರೆ ಸಮ್ಮೇಳನ: ಮಾಹಿತಿ ಸಂಗ್ರಹಿಸಿ ತರಲು ರೈತರಲ್ಲಿ ಮನವಿ



ಶಿರಸಿ, ನ.11: ನವೆಂಬರ್ 13 ರಂದು ನಡೆಯಲಿರುವ ಕೆರೆ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ರೈತರು ತಮ್ಮ ಗ್ರಾಮದ ಕೆರೆಗಳ ಪರಿಸ್ಥಿತಿ, ಕೆರೆಗಳ ಅತಿಕ್ರಮಣ, ಹೂಳು ತುಂಬುವಿಕೆ, ಕೆರೆ ವಿಸ್ತೀರ್ಣ, ಸರ್ವೆ ನಂ., ವರ್ಷಪೂರ್ತಿ ನೀರು ಇದೆಯೋ, ಹುಲ್ಲು ಜೊಂಡು ಬೆಳೆದಿದೆಯೋ, ನಿರ್ವಹಣಾ ಜವಾಬ್ದಾರಿ ಯಾರದ್ದು ಇತ್ಯಾದಿ ಮಾಹಿತಿ ಸಂಗ್ರಹಿಸಿ ತರಬೇಕೆಂದು ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ವಿನಂತಿಸಿದ್ದಾರೆ.

ಅವರು ಶಿರಸಿಯ ಯೋಗಮಂದಿರದಲ್ಲಿ ಕೆರೆ ಸಮ್ಮೇಳನದ ಪೂರ್ವಸಿದ್ಧತೆ ಮಾಹಿತಿ ನೀಡಲು ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತ, ಕೆರೆ ಸಮ್ಮೇಳನದ ಉದ್ಘಾಟನೆಯನ್ನು ಸಸ್ಯ ಲೋಕದ ಕೆರೆಗೆ ಭೇಟಿ ನೀಡಿ ಪೂಜೆ ಮಾಡುವ ಮೂಲಕ ನೆರವೇರಿಸಲಾಗುವುದು. ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಉದ್ಘಾಟನೆ ಮಾಡುವರು.

ಸಮ್ಮೇಳನಕ್ಕೆ 7 ರಾಜ್ಯಗಳಿಂದ ತಜ್ಞ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದು, ಇವರ ಜೊತೆಯಾಗಿ 8 ವಿಶ್ವವಿದ್ಯಾಲಯಗಳ 42 ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಳ್ಳುವರು. ಗ್ರಾಮಾಭ್ಯುದಯದ 100 ಸ್ವ ಸಹಾಯ ಸಂಘಗಳು ತಮ್ಮ ಗ್ರಾಮದ ಕೆರೆ ಪರಿಸ್ಥಿತಿ ಅಭ್ಯಾಸ ಮಾಡಿ ಸಮ್ಮೇಳನದಲ್ಲಿ ಪಾಲ್ಗೊಳ್ಳುವರು.

ಕೆರೆ ಸಮ್ಮೇಳನದ ಅಂಗವಾಗಿ ಸಮ್ಮೇಳನದ ಸಂಪರ್ಕ ಅಭಿಯಾನ ನಡೆದಿದೆ. ವಿದ್ಯಾರ್ಥಿಗಳ ಕೆರೆ ಅಧ್ಯಯನಗಳ ಮಂಡನೆ, ಸ್ಪರ್ಧೆಗಳು ಬೆಂಗಳೂರು, ಶಿರಸಿ, ಹೊನ್ನಾವರಗಳಲ್ಲಿ ನವೆಂಬರ್ ಮೊದಲನೇವಾರವೇ ನಡೆದಿದೆ. ದೇವಾಲಯ ಆಡಳಿತ ಮಂಡಳಿ ಒಕ್ಕೂಟದ ಸಭೆ ಪೂಜ್ಯ ಸ್ವರ್ಣವಲ್ಲೀ ಶ್ರೀಗಳ ಅಧ್ಯಕ್ಷತೆಯಲ್ಲಿ ನಡೆದಾಗ ಕೆರೆ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ನಿರ್ಣಯ ಕೈಕೊಳ್ಳಲಾಗಿದೆ ಎಂದರು.

ಶಿವಮೊಗ್ಗ ಜಿಲ್ಲೆಯ ಜಿಗಳೇಮನೆ ಗ್ರಾಮದ ಗ್ರಾಮ ಅರಣ್ಯ ಸಮಿತಿಗೆ ಕೆರೆಗಳ ಪುನಶ್ಚೇತನ ಮಾಡಿದ ಕಾರಣದಿಂದಾಗಿ ಸನ್ಮಾನ ಮಾಡುವ ಕಾರ್ಯಕ್ರಮ ಈ ಸಮ್ಮೇಳನದಲ್ಲಿ ಹಮ್ಮಿಕೊಳ್ಳಲಾಗಿದೆ.

ಪಶ್ಚಿಮಘಟ್ಟದ ಜೌಗು ಪ್ರದೇಶ, ಕೆರೆ ಸಂರಕ್ಷಣೆ ಕುರಿತು ಯಶೋಗಾಥೆಗಳು, ಅನುಭವ-ಅಭಿಪ್ರಾಯಗಳ ಹಂಚಿಕೆ ಗೋಷ್ಠಿಯ ಅಧ್ಯಕ್ಷತೆಯನ್ನು ಹಿರಿಯ ಗ್ರಾಮೀಣ ಅಭಿವೃದ್ಧಿ ಕಾರ್ಯಕರ್ತ ಡಾ.ಪ್ರಕಾಶ ಭಟ್ ವಹಿಸುವರು. ಪರಿಸರ ಬರಹಗಾರ ಶಿವಾನಂದ ಕಳವೆ ಅವರ ಮುಖ್ಯ ವರದಿ ಮಂಡನೆ ನಂತರ ಶಿವಮೊಗ್ಗ, ಉ.ಕ., ಚಿಕ್ಕಮಗಳೂರು, ದ.ಕ.ಜಿಲ್ಲೆಯ ಪರಿಸರ ತಜ್ಞರು ಅನುಭವ, ಕೆರೆ ಸಂರಕ್ಷಣಾ ಪ್ರಯತ್ನದ ವರದಿ ಮಂಡಿಸುವರು.

ದೇವಾಲಯ ಪುಷ್ಕರಣಿಗಳ ನಿರ್ವಹಣೆಯ ಗೋಷ್ಠಿಯ ಸಾನ್ನಿಧ್ಯವನ್ನು ಸ್ವರ್ಣವಲ್ಲಿಯ ಶ್ರೀಗಳು ವಹಿಸುವರು. ಅದೇ ಸಂದರ್ಭದಲ್ಲಿ ಶೈಲಜಾ ಮತ್ತು ರಘುನಂದನ ಭಟ್ ಕೈಗೊಂಡ ಕೆರೆ ಪುನಶ್ಚೇತನ ಪ್ರಯೋಗಗಳ ಯಶೋಗಾಥೆ ಲೇಖನಗಳ ಸಂಕಲನವನ್ನು ಪ್ರೊ. ಬಿ.ಎಂ.ಕುಮಾರಸ್ವಾಮಿ ಬಿಡುಗಡೆ ಮಾಡುವರು. ಎರಡನೇ ದಿನದ ಗೋಷ್ಠಿಯಲ್ಲಿ ಪರಿಸರವಾದಿ ಸುರೇಶ ಹೆಬ್ಳೀಕರ್ ಪಾಲ್ಗೊಳ್ಳುವರೆಂದು ಈ ಸಂದರ್ಭದಲ್ಲಿ ತಿಳಿಸಿದರು.